**All India Radio: Bangalore**
**Regional Bulletin In Kannada**
**24.08.2025 / 7.35 p.m.**

ಆಕಾಶವಾಣಿ ಬೆಂಗಳೂರು

ಪ್ರದೇಶ ಸಮಾಚಾರ

**24.08.2025 / 7.35 p.m.**

**<><><><>**

ಮುಖ್ಯಾಂಶಗಳು

೧. ಪ್ಯಾರಾಚೂಟ್ ಆಧಾರಿತ ವೇಗವರ್ಧನೆ ವ್ಯವಸ್ಥೆಯ ಇಂಟಿಗ್ರೇಟೆಡ್ ಏರ್ ಡ್ರಾಪ್ ಟೆಸ್ಟ್ ಯಶಸ್ವಿಯಾಗಿ ಪೂರ್ಣಗೊಳಿಸಿದ ಇಸ್ರೋ

೨. ನಾಳೆಯಿಂದ ಪ್ರಧಾನಿ ಎರಡು ದಿನಗಳ ಕಾಲ ಗುಜರಾತ್ ಭೇಟಿ ; ೧ ಸಾವಿರದ ೨೦೦ ಕೋಟಿ ರೂಪಾಯಿ ಮೌಲ್ಯದ ಯೋಜನೆಗಳಿಗೆ ಚಾಲನೆ

೩. ಆಗಸ್ಟ್ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರಿಂದ ಭಾರತೀಯ ಸಾಲ ಮಾರುಕಟ್ಟೆಗೆ ೬ ಸಾವಿರದ ೨೦೬ ಕೋಟಿ ರೂಪಾಯಿಗಳ ದಾಖಲೆಯ ಒಳಹರಿವು

೪. ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್ ; ೫೦ ಮೀಟರ್ ಸ್ಪರ್ಧೆಯಲ್ಲಿ ಚಿನ್ನ ಗಳಿಸಿದ ಭಾರತದ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್

**><><><><><><><><><**

ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಳೆ ಮತ್ತು ನಾಡಿದ್ದು ಗುಜರಾತ್‌ಗೆ ಭೇಟಿ ನೀಡಲಿದ್ದು, ಹಲವಾರು ಮಹತ್ವದ ಅಭಿವೃದ್ಧಿ ಯೋಜನೆಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ೧ ಸಾವಿರದ ೨೦೦ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಸಂಯೋಜಿತ ಹೂಡಿಕೆಯೊಂದಿಗೆ ಈ ಯೋಜನೆಗಳು, ಅಹಮದಾಬಾದ್, ಮೆಹ್ಸಾನಾ ಮತ್ತು ಗಾಂಧಿನಗರದಲ್ಲಿ ಮೂಲಸೌಕರ್ಯವನ್ನು ಆಧುನೀಕರಿಸುವುದು, ವಿದ್ಯುತ್ ವಿತರಣೆಯನ್ನು ಹೆಚ್ಚಿಸುವುದು ಮತ್ತು ನಾಗರಿಕ ಸೇವೆಗಳನ್ನು ಸುಧಾರಿಸುವ ಗುರಿಯನ್ನು ಹೊಂದಿವೆ. ತಮ್ಮ ಭೇಟಿಯ ಸಮಯದಲ್ಲಿ, ಪ್ರಧಾನಿಯವರು ಅಹಮದಾಬಾದ್, ಮೆಹ್ಸಾನಾ ಮತ್ತು ಗಾಂಧಿನಗರ ಜಿಲ್ಲೆಗಳಲ್ಲಿ ಉತ್ತರ ಗುಜರಾತ್ ವಿಜ್ ಕಂಪನಿ ಲಿಮಿಟೆಡ್ ಮತ್ತು ಗುಜರಾತ್ ಎನರ್ಜಿ ಟ್ರಾನ್ಸ್‌ಮಿ?ನ್ ಕಾರ್ಪೊರೇ?ನ್ ಲಿಮಿಟೆಡ್‌ನ ಐದು ಪ್ರಮುಖ ವಿದ್ಯುತ್ ವಿತರಣಾ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಒಟ್ಟು ೧ ಸಾವಿರದ ೧೨೨ ಕೋಟಿ ರೂಪಾಯಿಗಳ ಈ ಯೋಜನೆಗಳು, ವಿದ್ಯುತ್ ವಿತರಣಾ ಜಾಲಗಳನ್ನು ಆಧುನೀಕರಿಸುವ ಮತ್ತು ಸ್ಥಳಾಂತರಿಸುವ ಮೂಲಕ ಸುಮಾರು ೪.೨೫ ಲಕ್ಷ ಗ್ರಾಹಕರಿಗೆ ಪ್ರಯೋಜನವನ್ನು ನೀಡಲು ವಿನ್ಯಾಸಗೊಳಿಸಲಾಗಿದೆ. ಇದರಿಂದಾಗಿ ಸುರಕ್ಷತೆ, ವಿಶ್ವಾಸಾರ್ಹತೆ ಮತ್ತು ದಕ್ಷತೆಯನ್ನು ಸುಧಾರಣೆಯಾಗಲಿದೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ೯೬ ಕೋಟಿ ರೂಪಾಯಿ ಮೌಲ್ಯದ ಎರಡು ಅತ್ಯಾಧುನಿಕ ಕಂದಾಯ ಇಲಾಖೆಯ ಕಟ್ಟಡಗಳಿಗೆ ಅಡಿಪಾಯ ಹಾಕಲಿದ್ದಾರೆ.

**><><><><><><><><><**

ಗಗನಯಾನ ಕಾರ್ಯಾಚರಣೆಗಳಿಗಾಗಿ ಪ್ಯಾರಾಚೂಟ್ ಆಧಾರಿತ ವೇಗವರ್ಧನೆ ವ್ಯವಸ್ಥೆಯ ಪ್ರತೀ ಹಂತದ ಪ್ರದರ್ಶನಕ್ಕಾಗಿ ಇಸ್ರೋ ತನ್ನ ಮೊದಲ ಇಂಟಿಗ್ರೇಟೆಡ್ ಏರ್ ಡ್ರಾಪ್ ಟೆಸ್ಟ್ - ಐಎಡಿಟಿ-೦೧ ಅನ್ನು ಇಂದು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಭಾರತದ ಮಹತ್ವಾಕಂಕ್ಷೆಯ ಮಾನವ ಬಾಹ್ಯಾಕಾಶಯಾನ ಕಾರ್ಯಾಚರಣೆಯತ್ತ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ. ಗಗನಯಾತ್ರಿಗಳನ್ನು ತನ್ನ ಬಾಹ್ಯಾಕಾಶ ನಿಲ್ದಾಣದಿಂದ ಸುರಕ್ಷಿತ ಕಾರ್ಯಾಚರಣೆಯ ಅಡಿಯಲ್ಲಿ ಮರಳಿ ತರುವ ಪ್ಯಾರಾಚೂಟ್ ವ್ಯವಸ್ಥೆಯನ್ನು ಮೌಲ್ಯೀಕರಿಸಲು ಇದು ಒಂದು ನಿರ್ಣಾಯಕ ವ್ಯಾಯಾಮವಾಗಿತ್ತು. ಈ ಪರೀಕ್ಷೆಯು ಇಸ್ರೋ, ಭಾರತೀಯ ವಾಯುಪಡೆ, ಡಿಆರ್‌ಡಿಒ, ಭಾರತೀಯ ನೌಕಾಪಡೆ ಮತ್ತು ಕರಾವಳಿ ಕಾವಲು ಪಡೆಯ ಜಂಟಿ ಪ್ರಯತ್ನವಾಗಿದೆ. ವಾಸ್ತವ ಮಾನವ ಬಾಹ್ಯಕಾಶ ಹಾರಾಟದ ಕಾರ್ಯಾಚರಣೆಯ ಮರು-ಪ್ರವೇಶ ಮತ್ತು ಸ್ಪ್ಲಾಶ್ ಡೌನ್ ಸಮಯದಲ್ಲಿ ಸಿಬ್ಬಂದಿ ಮಾಡ್ಯೂಲ್ ಅನ್ನು ನಿಧಾನಗೊಳಿಸುವ ಮತ್ತು ಸ್ಥಿರಗೊಳಿಸುವ ಪ್ಯಾರಾಚೂಟ್‌ಗಳ ಸಂಪೂರ್ಣ ಸೂಟ್‌ಅನ್ನು ಮೌಲ್ಯಮಾಪನ ಮಾಡಲು ಈ ಪರೀಕ್ಷೆಯನ್ನು ವಿನ್ಯಾಸಗೊಳಿಸಲಾಗಿದೆ. ಹೆಚ್ಚುವರಿಯಾಗಿ ಇಸ್ರೋ, ಎರಡನೇ ಪರೀಕ್ಷಾ ವಾಹನ ಪ್ರದರ್ಶನ ಮಿಷನ್ ಮತ್ತು ಮೊದಲ ಮಾನವ ರಹಿತ ಗಗನಯಾನ ಮಿಷನ್ ನಂತಹ ಮುಂಬರುವ ಪರೀಕ್ಷೆಗಳಿಗೆ ಸಹ ತಯಾರಿ ನಡೆಸುತ್ತಿದೆ. ಇದು ಭಾರತದ ಮೊದಲ ಮಾನವ ಬಾಹ್ಯಾಕಾಶ ಯಾನಕ್ಕೆ ದಾರಿ ಒದಗಿಸುತ್ತದೆ.

><><><><><><><><

ಜಮ್ಮು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಚಸೋತಿ ಗ್ರಾಮಕ್ಕೆ ಇಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿ ನೀಡಿ, ಮೇಘಸ್ಫೋಟದಿಂದ ಸಂಕಷ್ಟಕ್ಕೊಳಗಾದ ಕುಟುಂಬಸ್ಥರೊಂದಿಗೆ ಸಮಾಲೋಚನೆ ನಡೆಸಿದರು. ಜೊತೆಗೆ ನಾಪತ್ತೆಯಾಗಿರುವವರಿಗಾಗಿ ನಡೆಯುತ್ತಿರುವ ಶೋಧ ಕಾರ್ಯಾಚರಣೆ, ಪರಿಹಾರ ಕಾರ್ಯಗಳ ಬಗ್ಗೆಯೂ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಜೀತೇಂದ್ರ ಸಿಂಗ್, ಜಮ್ಮು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಉಪಸ್ಥಿತರಿದ್ದರು. ಆಗಸ್ಟ್ ೧೪ ರಂದು ಸಂಭವಿಸಿದ ಮೇಘಸ್ಫೋಟದಲ್ಲಿ ಸುಮಾರು ೬೫ ಜನರು ಸಾವನ್ನಪ್ಪಿದರು. ೧೦೦ ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಹಲವರು ಕಾಣೆ ಕೂಡ ಆಗಿದ್ದು, ಪತ್ತೆಗಾಗಿ ಕಾರ್ಯಾಚರಣೆ ಮುಂದುವರೆದಿದೆ. ಬಳಿಕ ಮಾತನಾಡಿದ ರಾಜನಾಥ್ ಸಿಂಗ್, ಮೇಘಸ್ಫೋಟದಿಂದ ಇನ್ನೂ ಭೂಕುಸಿತ ಸಂಭವಿಸುತ್ತಿದ್ದು, ರಕ್ಷಣಾ ಕಾಯಾಚರಣೆ ಮುಂದುವರೆಸಲಾಗಿದೆ. ಸದ್ಯ ಆಸ್ಪತ್ರೆಗೆ ದಾಖಲಾಗಿರುವ ಎಲ್ಲಾ ರೋಗಿಗಳು ಚೇತರಿಸಿಕೊಳ್ಳುತ್ತಿದ್ದಾರೆ ಎಂದರು. ವೈದ್ಯಕೀಯ ಕಾಲೇಜಿನ ವೈದ್ಯರನ್ನು ಶ್ಲಾಘಿಸಿದ ಸಚಿವರು, ಎಲ್ಲಾ ವೈದ್ಯರು ಸಂಪೂರ್ಣ ಸಮರ್ಪಣಾಭಾವದಿಂದ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ತೊಡಗಿದ್ದಾರೆ ಎಂದು ಹೇಳಿದ್ದಾರೆ.

><><><><><><><><

ಮತದಾರರ ಅಧಿಕಾರ ಯಾತ್ರೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಪ್ರಸಾದ್ ಯಾದವ್ ಹತಾಶೆಯಿಂದ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ನಿಂದನೀಯ ಭಾಷೆ ಬಳಸುತ್ತಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ ಮತ್ತು ರಾಷ್ಟ್ರೀಯ ವಕ್ತಾರ ರವಿಶಂಕರ್ ಪ್ರಸಾದ್ ಇಂದು ಆರೋಪಿಸಿದ್ದಾರೆ. ಪಾಟ್ನಾದ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಿಗೆ ಭಾರತದ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಂಬಿಕೆ ಇಲ್ಲ, ಆದ್ದರಿಂದ ಅವರು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನು ವಿರೋಧಿಸುತ್ತಿದ್ದಾರೆ ಎಂದು ಆರೋಪಿಸಿದರು.

**ಧ್ವನಿ : ರವಿಶಂಕರ್ ಪ್ರಸಾದ್ ( ೩೧ ಸೆಕೆಂಡ್ಸ್)**

ಆಗಸ್ಟ್ ೧ ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ ಆದರೆ ಇಲ್ಲಿಯವರೆಗೆ ಸ್ವೀಕರಿಸಲಾದ ಹಕ್ಕುಗಳು ಮತ್ತು ಆಕ್ಷೇಪಣೆಗಳು ಎಸ್ಐಆರ್ ವಿರುದ್ಧದ ಅವರ ಹಕ್ಕುಗಳನ್ನು ದೃಢೀಕರಿಸುತ್ತಿಲ್ಲ ಎಂದು ಪ್ರಸಾದ್ ಹೇಳಿದರು. ಕಾಂಗ್ರೆಸ್ ಮತ್ತು ಆರ್‌ಜೆಡಿ ಗಣನೀಯ ಸಂಖ್ಯೆಯ ಬಿಎಲ್‌ಎಗಳನ್ನು ಹೊಂದಿವೆ. ಆದರೆ ಬಿಹಾರದಲ್ಲಿ ಮತದಾರರ ಪಟ್ಟಿಯಲ್ಲಿ ಕಾಣೆಯಾದ, ಸ್ಥಳಾಂತರಗೊಂಡ ಮತ್ತು ಮರಣ ಹೊಂದಿದ ಮತದಾರರನ್ನು ಪ್ರತಿನಿಧಿಸುವ ಎಎಸ್‌ಡಿ ಪಟ್ಟಿಯ ಬಗ್ಗೆ ಅವರು ತಮ್ಮ ದೂರನ್ನು ನೋಂದಾಯಿಸಲು ಮುಂದೆ ಬರುತ್ತಿಲ್ಲ ಎಂದು ಅವರು ಹೇಳಿದರು.

><><><><><><><><

ಬಿಹಾರದ ಕರಡು ಮತದಾರರ ಪಟ್ಟಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಶೇಕಡಾ ೯೮ಕ್ಕಿಂತ ಹೆಚ್ಚು ಮತದಾರರ ದಾಖಲೆಗಳನ್ನು ಇಲ್ಲಿಯವರೆಗೆ ಸ್ವೀಕರಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಜನರಿಗೆ ಇನ್ನೂ ಎಂಟು ದಿನಗಳ ಕಾಲಾವಕಾಶವಿದೆ ಎಂದು ಆಯೋಗವು ಹೇಳಿಕೆಯಲ್ಲಿ ತಿಳಿಸಿದೆ. ಹಕ್ಕು ಮತ್ತು ಆಕ್ಷೇಪಣೆಗಳ ಅವಧಿಯು ಮತದಾರರಿಗೆ ಕರಡು ಪಟ್ಟಿಗಳಲ್ಲಿನ ತಪ್ಪುಗಳನ್ನು ಸರಿಪಡಿಸಲು ಮಾತ್ರವಲ್ಲದೆ, ಎಣಿಕೆ ನಮೂನೆಗಳನ್ನು ಸಲ್ಲಿಸುವಾಗ ಅವರು ಒದಗಿಸದೇ ಇರಬಹುದಾದ ಅಗತ್ಯ ದಾಖಲೆಗಳನ್ನು ಸಹ ಸಲ್ಲಿಸಲು ಅನುವು ಮಾಡಿಕೊಡುತ್ತದೆ ಎಂದು ಚುನಾವಣಾ ಸಂಸ್ಥೆ ಒತ್ತಿ ಹೇಳಿದೆ.

><><><><><><><><

ಆಗಸ್ಟ್ ತಿಂಗಳಿನಲ್ಲಿ ಇಲ್ಲಿಯವರೆಗೆ ವಿದೇಶಿ ಹೂಡಿಕೆದಾರರು ಭಾರತೀಯ ಸಾಲ ಮಾರುಕಟ್ಟೆಗೆ ೬ ಸಾವಿರದ ೨೦೭ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದ್ದಾರೆ. ಆದಾಗಿಯೂ, ಠೇವಣಿಗಳ ದತ್ತಾಂಶದ ಪ್ರಕಾರ, ವಿದೇಶಿ ಬಂಡವಾಳ ಹೂಡಿಕೆದಾರರು ಅಥವಾ ಎಫ್.ಪಿ.ಐ.ಗಳು ಆಗಸ್ಟ್ ೨೨ರಂದು  ಕೊನೆಗೊಂಡ ಭಾರತೀಯ ಷೇರು ಮಾರುಕಟ್ಟೆಗಳಿಂದ ೨೨ ಸಾವಿರದ ೪೦ ಕೋಟಿ ರೂಪಾಯಿಗಳನ್ನು ಹಿಂತೆಗೆದುಕೊಂಡಿದ್ದಾರೆ. ಮೂರು ತಿಂಗಳ ಸಕಾರಾತ್ಮಕ ಒಳಹರಿವನ್ನು ಹಿಮ್ಮೆಟ್ಟಿಸುವ ಮೂಲಕ, ಎಫ್.ಪಿ.ಐ. ಜುಲೈನಲ್ಲಿ ಷೇರು ಮಾರುಕಟ್ಟೆಗಳಿಂದ ೧೭ ಸಾವಿರದ  ೭೪೧ ಕೋಟಿ ರೂಪಾಯಿಗಳನ್ನು ಹಿಂತೆಗೆದುಕೊಂಡಿತ್ತು. ಆದರೆ ಜೂನ್‌ನಲ್ಲಿ ೧೪ ಸಾವಿರದ ೫೯೦ ಕೋಟಿ ರೂಪಾಯಿಗಳ ನಿವ್ವಳ ಹೂಡಿಕೆ ಮಾಡಿದೆ. ಮೇ ತಿಂಗಳಲ್ಲಿ ಒಳಹರಿವು ೧೯ ಸಾವಿರದ ೮೬೦ ಕೋಟಿ ರೂಪಾಯಿಗಳಾಗಿದ್ದು, ಇದು ೨೦೨೫ರ ಕ್ಯಾಲೆಂಡರ್ ವರ್ಷದ ಇದುವರೆಗಿನ ಅತ್ಯುತ್ತಮ ಪ್ರದರ್ಶನವಾಗಿದೆ.

><><><><><><><><

ರಷ್ಯಾದ ಕುರ್ಸ್ಕ್ ಪ್ರದೇಶದ ಪರಮಾಣು ವಿದ್ಯುತ್ ಸ್ಥಾವರದ ಬಳಿ ಇಂದು ಉಕ್ರೇನಿಯನ್ ಕಾಮಿಕೇಜ್ ಡ್ರೋನ್ ಅನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ. ಸ್ಥಾವರದ ನಿರ್ವಹಣಾ ಮಂಡಳಿಯನ್ನು ಉಲ್ಲೇಖಿಸಿ ಮಾಡಿರುವ ವರದಿಗಳ ಪ್ರಕಾರ, ಇಂದು ಮುಂಜಾನೆ ಉರುಳಿಸಲಾದ ಡ್ರೋನ್, ಸ್ಥಳದಲ್ಲಿ ಸಣ್ಣ ಬೆಂಕಿಯನ್ನು ಉಂಟುಮಾಡಿತು. ರಷ್ಯಾದ ಮೇಲೆ ಕಳೆದ ರಾತ್ರಿ ದಾಳಿ ಮಾಡಲೆತ್ನಿಸಿದ ೯೫ ಉಕ್ರೇನಿಯನ್ ಡ್ರೋನ್‌ಗಳನ್ನು, ತನ್ನ ವಾಯು ರಕ್ಷಣಾ ವ್ಯವಸ್ಥೆಗಳು ಹೊಡೆದುರುಳಿಸಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯವು ಎಂದು ಹೇಳಿದೆ.

><><><><><><><><

ಕಜಕೀಸ್ತಾನದ ಶಿಮ್ಕೆಂಟ್‌ನಲ್ಲಿ ನಡೆಯುತ್ತಿರುವ ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್‌ನ ೫೦ ಮೀಟರ್ ರೈಫಲ್ಸ್ ಸ್ಪರ್ಧೆಯಲ್ಲಿ ಭಾರತದ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಚಿನ್ನದ ಪದಕ ಗೆದ್ದಿದ್ದಾರೆ.  ಸ್ಪರ್ಧೆಯಲ್ಲಿ ಅವರು, ೪೬೨.೫ ಅಂಕಗಳನ್ನು ಗಳಿಸುವ ಮೂಲಕ ಅಂಕ ಪಟ್ಟಿಯಲ್ಲಿ ಪ್ರಥಮ ಸ್ಥಾನ ಪಡೆದರೆ, ಚೀನಾದ ವೆನ್ಯು ಝಾವೊ ಬೆಳ್ಳಿ ಪದಕ ಗೆದ್ದರು. ಜಪಾನ್‌ನ ನಯೋಯಾ ಒಕಾಡಾ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮೊದಲು, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್, ಚೈನ್ ಸಿಂಗ್ ಮತ್ತು ಅಖಿಲ್ ಶಿಯೋರನ್ ಅವರನ್ನೊಳಗೊಂಡ ಭಾರತೀಯ ಪುರುಷರ ತಂಡ ೫೦ ಮೀಟರ್ ರೈಫಲ್ ತ್ರಿ ಪೊಸಿಷನ್ ತಂಡ ಸ್ಪರ್ಧೆಯಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿತು.

><><><><><><><><